

# ಕೋತಿ ರಾಜಕುಮಾರ

ಮರೀನ ಎನ್ನುವ ಚಂದದ ಹುಡುಗಿ ಇದ್ದಳು. ಅವಳ ತಾಯಿ ಕೂಲಿ ನಾಲಿ ಮಾಡಿ ಹಣ ಉಳಿಸಿ ಒಂದು ಮಡಕೆಯಲ್ಲಿ ಜೋಪಾನವಾಗಿ ತೆಗೆದಿರಿಸಿದ್ದಳು. ಮಗಳಿಗೆ ಒಳ್ಳೆಯ ಸಂಬಂಧ ಬಂದರೆ ಮದುವೆ ಮಾಡಲು ಖರ್ಚಿಗೆ ಹಣ ಬೇಕಾದರೆ ಉಪಯೋಗವಾಗಲಿ ಎಂಬುದು ಅವಳ ಯೋಚನೆ.

ಒಂದು ದಿನ ಅವಳು ಪಕ್ಕದ ಮನೆಯವಳೊಂದಿಗೆ ಕೂಲಿ ಕೆಲಸ ಮಾಡಲು ಹೊಲಕ್ಕೆ ಹೋಗಿದ್ದಳು. ಮರಳಿ ಬರುವಾಗ ಜೋರಾಗಿ ಮಳೆ ಬಂತು. ಮಳೆಯಿಂದ ಪಾರಾಗಲು ಇಬ್ಬರೂ ಒಂದು ದೊಡ್ಡ ಮರದ ಕೆಳಗೆ ನಿಂತರು. ಕತ್ತಲು ಮುಸುಕಿದರೂ ಮಳೆ ನಿಲ್ಲಲಿಲ್ಲ. ಆಗ ಮರೀನಳ ತಾಯಿ ಜೊತೆಗಾತಿಯೊಂದಿಗೆ, 'ಮಳೆ ಬಿಡುವ ಲಕ್ಷಣವೇ ಕಾಣಿಸುತ್ತಿಲ್ಲ. ಮಗಳೊಬ್ಬಳೇ ಮನೆಯಲ್ಲಿದ್ದಾಳೆ. ಅವಳ ಮದುವೆಗೆ ಅಂತ ಒಂದು ಮಡಕೆಯ ತುಂಬ ಬಂಗಾರದ ನಾಣ್ಯಗಳನ್ನು ಉಳಿಸಿಟ್ಟಿದ್ದೇನೆ. ಯಾರಾದರೂ ಕಳ್ಳರು ಬಂದರೆ ಎಂದು ಭಯವಾಗುತ್ತದೆ' ಎಂದು ಹೇಳಿಕೊಂಡಳು. ರಾತ್ರಿ ಕೂಡ ಮಳೆ ನಿಲ್ಲಲಿಲ್ಲ. ಅವಳು ಬೆಳಗಾಗುವವರೆಗೂ ಮರದ ಕೆಳಗೆ ನಿಂತುಕೊಂಡಿದ್ದಳು.

ಮರದ ಇನ್ನೊಂದು ಪಕ್ಕದಲ್ಲಿ ಕೋತಿಯಾಡಿಸುವವನೊಬ್ಬ ತನ್ನ ಕೋತಿಯೊಂದಿಗೆ ಮಳೆಯಿಂದ ರಕ್ಷಣೆ ಪಡೆಯಲು ನಿಂತಿದ್ದ. ಅವನು ಹೆಂಗಸು ಹೇಳಿದ ಮಾತುಗಳನ್ನು ಸರಿಯಾಗಿ ಕೇಳಿಸಿಕೊಂಡ. ಮೆಲ್ಲಗೆ ಅಲ್ಲಿಂದ ಹೊರಟು ಮರೀನಳ ಮನೆ ತಲಪಿದ. ಅವಳನ್ನು ಕರೆದು, 'ಒಳಗೆ ಅಡುಗೆಮನೆಯಲ್ಲಿ ಒಂದು ಮಡಕೆಯಲ್ಲಿ ನಿನ್ನ ಅಮ್ಮ ಚಿನ್ನದ ನಾಣ್ಯಗಳನ್ನು ಇಟ್ಟಿದ್ದಾಳಂತೆ. ಈ ಕೋತಿಯನ್ನು ತೆಗೆದುಕೊಂಡು ಆ ಮಡಕೆಯನ್ನು ಕೊಡಲು ಹೇಳಿದ್ದಾಳೆ' ಎಂದು ಕೇಳಿದ. ಮರೀನ ಅವನ ಮಾತನ್ನು ನಂಬಿ ಮಡಕೆಯನ್ನು ಕೊಟ್ಟಳು. ಕೋತಿಯನ್ನು ಕಟ್ಟಿ ಹಾಕಿದಳು.

ಅವಳ ತಾಯಿ ಬಂದಾಗ ಜಗಲಿಯಲ್ಲಿ ಈ ಗಡವ ಕೋತಿಯನ್ನು ಕಂಡು, 'ಈ ದರಿದ್ರವನ್ನು ಯಾರು ತಂದರು?' ಎಂದು ಮಗಳನ್ನು ಕೇಳಿದಳು. ಮರೀನ ಬೆರಗಾಗಿ, 'ನೀನೇನಮ್ಮ, ಹೀಗೆ ಕೇಳುತ್ತಿರುವೆ? ನೀನೇ ಒಳಗಿರುವ ನಾಣ್ಯಗಳನ್ನು ಕೊಟ್ಟು ಇದನ್ನು ಕೊಳ್ಳುವುದಕ್ಕೆ ಹೇಳಿದೆಯಲ್ಲ?' ಎಂದು ಕೇಳಿದಳು.

ಯಾರೋ ಮೋಸ ಮಾಡಿ ಹಣವನ್ನು ಅಪಹರಿಸಿರುವುದು ಮರೀನಳ ತಾಯಿಗೆ ತಿಳಿದಾಗ ತುಂಬ ಹೊತ್ತು ಗೋಳಾಡಿದಳು. ಕೋತಿಯನ್ನು ನೋಡಿ, 'ಈ ಕೆಟ್ಟ ಕೋತಿಯಿಂದ ನಮಗೇನೂ ಲಾಭವಿಲ್ಲ' ಎನ್ನುತ್ತ ಹಗ್ಗ ಬಿಚ್ಚಿ ಅದನ್ನು ಹೊರಗೆ ಓಡಿಸಿದಳು. ಆದರೆ ಕೋತಿ ಮನೆಯಿಂದ ಹೋಗಲಿಲ್ಲ. ಮರುದಿನ ಅವಳ ತಾಯಿ ಹಣವನ್ನು ಕಳಕೊಂಡ ತಪ್ಪಿಗೆ ಮರೀನಳೇ ಕಟ್ಟಿಗೆ ಹೊತ್ತು ತಂದು ಮಾರಾಟ ಮಾಡಬೇಕು. ಹಣ ಗಳಿಸಿ ಜೋಪಾನ ಮಾಡಬೇಕು ಎಂದು ಹೇಳಿದಾಗ ಅವಳು ಹಗ್ಗ ಮತ್ತು ಕೊಡಲಿ ತೆಗೆದುಕೊಂಡು ಕಾಡಿಗೆ ಹೊರಟಳು. ಆಗ ಕೋತಿ ಮನುಷ್ಯ ಭಾಷೆಯಲ್ಲಿ, 'ನಾನೂ ನಿನ್ನೊಂದಿಗೆ ಕಟ್ಟಿಗೆ ಕಡಿಯಲು ಬರುತ್ತೇನೆ' ಎಂದು ಒಂದು ಕೊಡಲಿ ತೆಗೆದುಕೊಂಡು ಹೊರಟಿತು. ಕಾಡಿಗೆ ಬಂದು ಮರೀನ ಕಟ್ಟಿಗೆ ಕಡಿಯುವಾಗ ಕೋತಿ ನಾಪತ್ತೆಯಾಯಿತು. ಸ್ವಲ್ಪ ಹೊತ್ತಿನಲ್ಲಿ ನೋಡಿದರೆ ಒಂದು ಗುಹೆಯಿಂದ ಹೊರಗೆ ಬರುವುದು ಕಾಣಿಸಿತು. ಅದರ ತಲೆಯಲ್ಲಿ ದೊಡ್ಡ ಮೂಟೆಯಿತ್ತು. ಮರೀನ ಪರೀಕ್ಷಿಸಿ ನೋಡಿದಳು. ಮೂಟೆಯಲ್ಲಿ ಬಂಗಾರ, ಮುತ್ತು, ರತ್ನಗಳು ತುಂಬಿದ್ದವು. ಯಾರೋ ಕಳ್ಳರು ಗುಹೆಯಲ್ಲಿ ಅಡಗಿಸಿಟ್ಟ ಐಶ್ವರ್ಯವನ್ನು ಅದು ತಂದಿರಬೇಕೆಂದು ಮರೀನ ತಿಳಿದುಕೊಂಡಳು.

ಮರೀನಳ ಜೊತೆಗೆ ಹೋದ ಕೋತಿ ಅವಳ ಜೊತೆಗೆ ಐಶ್ವರ್ಯದ ರಾಶಿಯನ್ನೇ ತಂದಿರುವುದು ಕಂಡು ತಾಯಿಗಾದ ಸಂತೋಷ ಅಷ್ಟಿಷ್ಟಲ್ಲ. ಬಗೆಬಗೆಯ ತಿನಸುಗಳನ್ನು ಉಣಬಡಿಸಿ ಕೋತಿಗೆ ಉಪಚಾರ ಮಾಡಿದಳು. 'ಎಲ್ಲ ಉಪಚಾರ ಒಂದೇ ದಿನದಲ್ಲಿ ಮುಗಿಸಬೇಡ. ಅಲ್ಲಿ ಇನ್ನೂ ತುಂಬ ಸಂಪತ್ತಿದೆ. ಅದನ್ನು ದಿನವೂ ಸ್ವಲ್ಪ ಸ್ವಲ್ಪವೇ ತರುತ್ತೇನೆ. ಆಮೇಲೆ

